# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(CIN-U04010KA2002SGC030436)

ದೂರವಾಣಿ ಸಂಖ್ಯೆ : (08472) 256782
ಫ್ಯಾಕ್ಸ್ ಸಂಖ್ಯೆ : (08472) 256647
ವೆಬ್‌ಸೈಟ್:www.gescom.karnataka.gov.in

ನಿಗಮ ಕಾರ್ಯಾಲಯ
ಗು.ವಿ.ಸ.ಕಂ.ನಿ.,ಕಲಬುರಗಿ.
ಇ-ಮೇಲ್:gm.gescom@gmail.com


ಸಂಖ್ಯೆ: ಗು.ವಿ.ಸ.ಕಂ.ನಿ/ಪ್ರ.ವ್ಯ/ಸಕಂಕಾ/2023-24/ C-48-72 ದಿನಾಂಕ: 11 JUL 2023

## ಸುತ್ತೋಲೆ

**ವಿಷಯ:-** ಕಂಪನಿ ಆಡಳಿತದ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಕಛೇರಿಯ ಪೂರ್ಣ ವಿಳಾಸವನ್ನು ದಾಖಲಿಸುವ ಬಗ್ಗೆ.

**ಉಲ್ಲೇಖ:-** 1. ಸುತ್ತೋಲೆ ಸಂಖ್ಯೆ: ಗು.ವಿ.ಸ.ಕಂ.ನಿ/ಪ್ರ.ವ್ಯ/ಲೆಅ(ಆ)/2019-20/ಸಿವೈಎಸ್-522 ದಿನಾಂಕ: 17.02.2020.
2. ಕಂಪನಿ ಕಾರ್ಯದರ್ಶಿ ರವರ ಟಿಪ್ಪಣಿ ದಿನಾಂಕ: 03.06.2023.

***********

ಮೇಲಿನ ವಿಷಯಕ್ಕೆ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರಲ್ಲಿ ಕಂಪನಿ ಕಾಯ್ದೆ-2013, ಸೆಕ್ಷನ್-12(3) ರನ್ವಯ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಗೆ ಬರುವ ಎಲ್ಲಾ ಕಛೇರಿಗಳ ಪತ್ರ ವ್ಯವಹಾರಗಳಲ್ಲಿ ಮೊದಲು ಕಛೇರಿಯ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಫ್ಯಾಕ್ಸ ಸಂಖ್ಯೆ, ಇ-ಮೇಲ್ ವಿಳಾಸ, ವೆಬ್‌ಸೈಟ್ ವಿಳಾಸ ಮತ್ತು ಕಂಪನಿ ನೊಂದಣಿ (CIN) ಸಂಖ್ಯೆ ಇವುಗಳನ್ನು ಕಡ್ಡಾಯವಾಗಿ ಲೇಟರ್ ಹೆಡ್‌ಗಳಲ್ಲಿ ದಾಖಲಿಸಲು ಸೂಚಿಸಲಾಗಿತ್ತು. ಆದರೂ ಸಹ ಹಲವಾರು ವಿಭಾಗಗಳು, ಉಪವಿಭಾಗಗಳು- ನಿಗಮ ಕಾರ್ಯಾಲಯವೂ ಸೇರಿದಂತೆ, ಸೂಚನೆಯಲ್ಲಿ ಹೇಳಿದ ಸ್ವರೂಪವನ್ನು ಅಳವಡಿಸಿಕೊಳ್ಳದಿರುವುದು ಕಂಡು ಬಂದಿರುತ್ತದೆ. ಮುಂದುವರೆದು, ಈ ನಿಬಂಧನೆಗಳನ್ನು ಅನುಸರಿಸದಿದ್ದಲ್ಲಿ ತಪ್ಪಿದ ಪ್ರತಿ ದಿನಕ್ಕೆ ರೂ. 1000/- ರಂತೆ ಮತ್ತು ತಪ್ಪಿದ ಪ್ರತಿ ಅಧಿಕಾರಿಗೆ, ಪ್ರತಿ ದಿನಕ್ಕೆ ರೂ. 1000/- ರಂತೆ ದಂಡ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿರುತ್ತದೆ.

ಹಿಂದಿನ ಸುತ್ತೋಲೆ ಸರಿಯಾಗಿ ಜಾರಿಯಾಗುತ್ತಿಲ್ಲವಾದ್ದರಿಂದ ನಿಬಂಧನೆಯನ್ನು ಕಟ್ಟು ನಿಟ್ಟಾಗಿ ಪಾಲಿಸಲು ಮತ್ತೊಮ್ಮೆ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ, ಒಂದು ವೇಳೆ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ, ಕಂಪನಿಯ ಮೇಲೆ ಬರುವ ದಂಡಕ್ಕೆ ಆಯಾ ವಿಭಾಗದ/ ಉಪವಿಭಾಗದ ಮುಖ್ಯಸ್ಥರನ್ನೇ, ದಂಡಕ್ಕೆ ಜವಾಬ್ದಾರರನ್ನಾಗಿ ಮಾಡಲಾಗುವುದು ಮತ್ತು ಸದರಿ ದಂಡವನ್ನು ವೇತನದಲ್ಲಿ ಕಡಿತಗೊಸಲಾಗುವುದು. ನಮೂನೆಯನ್ನು ಮತ್ತೊಮ್ಮೆ ಈ ಸುತ್ತೋಲೆಗೆ ಲಗತ್ತಿಸಿದೆ.

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ.ಸಂ.ಅ)
ಗುವಿಸಕಂನಿ, ಕಲಬುರಗಿ

**ಪ್ರತಿಗಳು:**

1. ಮುಖ್ಯ ಆರ್ಥಿಕ ಅಧಿಕಾರಿ, ಗುವಿಸಕಂನಿ, ಕಲಬುರಗಿ ರವರ ಮಾಹಿತಿಗಾಗಿ.
2. ಮುಖ್ಯ ಇಂಜಿನಿಯರ್ (ವಿ), ಕಾರ್ಯಚರಣೆ, ಗುವಿಸಕಂನಿ, ಕಲಬುರಗಿ ರವರ ಮಾಹಿತಿಗಾಗಿ.
3. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಗುವಿಸಕಂನಿ, ಕಲಬುರಗಿ ರವರ ಮಾಹಿತಿಗಾಗಿ.
4. ಆರ್ಥಿಕ ಸಲಹೆಗಾರರು (ಆಂ.ಪ), ಗುವಿಸಕಂನಿ, ಕಲಬುರಗಿ ರವರ ಮಾಹಿತಿಗಾಗಿ.
5. ಕಂಪನಿ ಕಾರ್ಯದರ್ಶಿ, ಗುವಿಸಕಂನಿ, ಕಲಬುರಗಿ ರವರ ಮಾಹಿತಿಗಾಗಿ.
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಗುವಿಸಕಂನಿ.
7. ಎಲ್ಲಾ ನಿಯಂತ್ರಣಾಧಿಕಾರಿ/ಉಪ-ಲೆಕ್ಕನಿಯಂತ್ರಣಾಧಿಕಾರಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಲೆಕ್ಕಧಿಕಾರಿಗಳು.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಗುವಿಸಕಂನಿ.
10. ವ್ಯ.ನಿ/ನಿ(ತಾಂ), ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ದೂರವಾಣಿ ಸಂಖ್ಯೆ: ____________________

ಫ್ಯಾಕ್ಸ್ ಸಂಖ್ಯೆ : ____________________

CIN:U04010KA2002SGC030436

Email: ______________

Website:www.gescom.karnataka.gov.in

**ನೋಂದಣಿ ಕಛೇರಿ:** ಗುವಿಸಕಂನಿ,

ನಿಗಮ ಕಾರ್ಯಾಲಯ, ಸ್ಟೇಷನ್ ಮುಖ್ಯ ರಸ್ತೆ,

ಕಲಬುರಗಿ–585102

**ಕಛೇರಿಯ ವಿಳಾಸ:** ________________

____________________